# ಏಳನೇ ಕೊಪ್ಪರಿಗೆ

● ಪಿ. ಪುರುಷೋತ್ತಮ ಕಾರಂತ

ಶ್ರೀರಾಮಕೃಷ್ಣರ ಉಪದೇಶಗಳಲ್ಲಿನ ದೃಷ್ಟಾಂತ ಕಥೆಗಳು ಮೇಲ್ನೋಟಕ್ಕೆ ಒಂದೊಂದೂ ಅಧ್ಯಾತ್ಮ ತತ್ವಗಳ ಒಂದು ಯೋಗ್ಯ ಉದಾಹರಣೆಯಾಗಿರುವುದನ್ನು ಮಾತ್ರ ನೋಡುತ್ತೇವೆ. ಆದರೆ ನಮ್ಮ ಮನಸ್ಸು ಪಕ್ವವಾದಾಗ ಆ ದೃಷ್ಟಾಂತ ಕಥೆ ನಮ್ಮ ಅಧ್ಯಾತ್ಮ ಜೀವನದ ನೆಲೆಯನ್ನು ಎಷ್ಟು ಆಳವಾಗಿ ಹಾಗೂ ವಿಶಾಲವಾಗಿ ಪ್ರವೇಶಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅವರು ಒಂದು ಕಥೆ ಹೀಗಿದೆ:

ಹಿಂದೊಮ್ಮೆ ಅರಸನ ಬಡ ಕ್ಷೌರಿಕನೊಬ್ಬನಿಗೆ ಯಕ್ಷ ಈ ಪ್ರಶ್ನೆಯನ್ನು ಹಾಕಿದ್ದ: 'ಏಳು ಕೊಪ್ಪರಿಗೆ ಚಿನ್ನ ಬೇಕೇ?' ಬೇಕೆಂದು ಒಪ್ಪಿದ್ದ ಆ ಬಡ ಕ್ಷೌರಿಕ. ಆತನು ತನ್ನ ಗುಡಿಸಲಿಗೆ ಬಂದಾಗ ಚಿನ್ನಾಭರಣಗಳಿರುವ ಏಳು ಕೊಪ್ಪರಿಗೆಗಳು ಥಳ ಥಳ ಹೊಳೆಯುತ್ತಿದ್ದವು. ಆರು ಕೊಪ್ಪರಿಗೆಗಳು ತುಂಬಿ ತುಳುಕುತ್ತಿದ್ದುದನ್ನು ಕಂಡ. ಆದರೆ ಏಳನೇ ಕೊಪ್ಪರಿಗೆಯಲ್ಲಿ ಒಂದು ಮುಷ್ಟಿಯಷ್ಟು ಚಿನ್ನಾಭರಣ ಕಡಮೆಯಿತ್ತು! ಅವನ ಆಸೆಯ ಮನಸ್ಸು ಆರು ತುಂಬಿದ್ದರೂ ಏಳನೆಯದನ್ನು ತುಂಬಿಸ ಬೇಡವೇ ಎನ್ನದೆ ಬಿಡಲಿಲ್ಲ. ಆ ಒಂದಿಷ್ಟು ಖಾಲಿ ಜಾಗವನ್ನು ತುಂಬಿಸುವ ಹಂಬಲದಲ್ಲಿ ಆ ಕ್ಷೌರಿಕ ಮತ್ತಷ್ಟು ಬಡವನಾದ. ಊಟ ಬಿಟ್ಟು ಒಂದೊಂದು ಚಿನ್ನದ ನಾಣ್ಯವನ್ನಾದರೂ ತುಂಬಿಸತೊಡಗಿದನಂತೆ ; ರಾಜನಲ್ಲಿ ಹೆಚ್ಚು ಸಂಬಳ ಯಾಚಿಸಿದನಂತೆ. ಮನಸ್ಸಿನಲ್ಲಿ ಅತೀವ ಕಳವಳ ಪಟ್ಟನಂತೆ! ಆದರೆ ಏನು ಮಾಡಿದರೂ ಆ ಏಳನೇ ಕೊಪ್ಪರಿಗೆಯ ಖಾಲಿ ಜಾಗ ತುಂಬುತ್ತಲೇ ಇರಲಿಲ್ಲವಂತೆ! ಅದರಲ್ಲಿ ಮತ್ತೆ ಮತ್ತೆ ಒಂದು ಹಿಡಿಯಷ್ಟು ಕಡಿಮೆಯೇ ಇರುತ್ತಿತ್ತು. ಆದರೂ ತುಂಬಿಸುವ ಹಂಬಲ ಮಾತ್ರ ತೀರಲೇ ಇಲ್ಲ! ಆರೂ ತುಂಬಿದ್ದರೇನಂತೆ, ಈ ಏಳನೆಯದನ್ನು ತುಂಬಿಸುವ ಹಂಬಲದಲ್ಲಿ, ಇದ್ದ ಹಾಲನ್ನವನ್ನೂ ಆತ ಉಣ್ಣಲಿಲ್ಲ! ಅವನ ಇಡೀ ಜೀವನ ಆ ಕೊರತೆ ತುಂಬುವ ಹಂಬಲದ ತುಮುಲವಾಯಿತು.

ಇದು ನಮ್ಮೆಲ್ಲರ ಕತೆ! ಮನುಷ್ಯನಿಗೆ ಈ ಹಂಬಲವನ್ನು ಬಿಟ್ಟರೆ ಬೇರಾವ ವ್ಯಕ್ತಿತ್ವವೇ ಇಲ್ಲವೆಂದು ತೋರುತ್ತದೆ. ಆದ್ದರಿಂದಲೇ ಮನುಷ್ಯ ಎಂದರೆ ಹಂಬಲ—ಹಂಬಲವೇ ಮನುಷ್ಯ ಆಗಿಬಿಡುತ್ತಾನೆ. ಅವೆರಡೂ ಬೇರೆಯಲ್ಲ. ಈ ಹಂಬಲವೆಂದರೇನು? ಇದು ನಮ್ಮೊಳಗಿನ ಕೊರತೆಯನ್ನು ತುಂಬಿಕೊಳ್ಳುವ ಪ್ರಯತ್ನವೇ? ನಮ್ಮ ಈ ಪ್ರಯತ್ನ ತಪ್ಪೆ?

ಎಳವೆಯಿಂದ ಮುಪ್ಪಿನತನಕ ಬೇರೆ ಬೇರೆ ವಯಸ್ಸಿನಲ್ಲಿ ಬೇರೆ ಬೇರೆ ರೂಪದಲ್ಲಿ ಈ ಹಂಬಲ ವಿವಿಧ ಹೆಸರುಗಳಿಂದ ವಿವಿಧ ಮುಖವಾಡಗಳನ್ನು ಧರಿಸಿಕೊಂಡು ಮಾನವನನ್ನು ಕಾಡುತ್ತಿರುತ್ತದೆ. ಎಳವೆಯಲ್ಲಿನ ಹಂಬಲಗಳು ಪ್ರೌಢಾವಸ್ಥೆಯಲ್ಲಿ ಕ್ಷುಲ್ಲಕವೆಂದು ಕಂಡುಬಂದರೂ, ಆಯಾಯ ಕಾಲಕ್ಕೆ ಅವು ಸಹಜವಾಗಿಯೇ ಮಾನವನನ್ನು ಆಳುತ್ತಿರುತ್ತವೆ. ಆದರೆ ಇದುವರೆಗೆ ಯಾವ ಹಂಬಲವೂ ಮನುಷ್ಯನನ್ನು ತೃಪ್ತನಾಗಿ ಮಾಡಿಲ್ಲವೆಂಬುದೂ ಸತ್ಯವೇ! ಒಂದು ಇನ್ನೊಂದನ್ನು ಹುಟ್ಟುಹಾಕುತ್ತದೆ. ಆದ್ದರಿಂದ ಅವುಗಳ ಸೆಳೆತ, ಒತ್ತಡ, ಪರಿಣಾಮಗಳೆಲ್ಲ ಯಾವಾಗಲೂ ಒಂದೇ ತೆರನಾಗಿರುತ್ತವೆ.

ಆದರೆ ಈ ಹಂಬಲಗಳ ವ್ಯಾಪ್ತಿ ಇಲ್ಲಿಗೇ ಮುಗಿಯುವುದಿಲ್ಲ. ನಮ್ಮನ್ನು ವಿವಿಧ ಹಂಬಲಗಳು ಒಮ್ಮೆಲೇ ಮುತ್ತಿಕೊಂಡಾಗ ನಮಗೆ ತಕ್ಕುದಾದುದನ್ನು ಆರಿಸಿಕೊಳ್ಳಲು ನಮ್ಮೊಳಗೇ ಒಬ್ಬ ಆಯ್ಕೆದಾರ ಹುಟ್ಟಿಕೊಳ್ಳುವುದನ್ನು ನಾವು ಗಮನಿಸಬಹುದು. ಆದರೆ ಈ ಆರಿಸುವವನು ಇಚ್ಛಾಶಕ್ತಿಯ ಬಲದಿಂದ ಕೂಡಿದ್ದರೆ, ಆಗ ಮಾತ್ರ ಜೀವನಕ್ಕೆ ಉಪಯೋಗವಾಗುವಂತಹುದನ್ನೇ ಆಯ್ದುಕೊಳ್ಳುತ್ತಾನೆ. ಹೀಗೆ, ಈ ಒಂದಿಷ್ಟು ಅಪೂರ್ಣತೆಯನ್ನು, ಕೊರತೆಯನ್ನು ತುಂಬುವ ಹಂಬಲದಿಂದಲೇ ಬೇಕೆನಿಸಿದಲ್ಲಿಗೆ ಓಡುವ, ಬೇಡವಾದುದನ್ನು ತಪ್ಪಿಸಿಕೊಳ್ಳುವ, ಗಳಿಸುವ, ಉಳಿಸುವ, ಅಳಿಸುವ, ವಿವಿಧ ರೀತಿಯಲ್ಲಿ ಹೋರಾಡುವ ಈ ಮಾನವ ಒಂದು ಹಂಬಲವೇ ಆಗಿರುತ್ತಾನೆ!

ಅಂದರೆ ಒಬ್ಬ ವ್ಯಕ್ತಿಯ ಅಪೂರ್ಣತೆ, ಒಂಟಿತನ ದ್ವಂದ್ವ—ಈ ಎಲ್ಲ ಸಮಸ್ಯೆಗಳೂ ನಿಜವಾಗಿಯೂ, ತನ್ನಲ್ಲಿಂದಲೇ ಉದ್ಭವಿಸಿಕೊಂಡವು ಎಂಬುದನ್ನು ಅರಿತುಕೊಳ್ಳಬೇಕು. ತನ್ನ ಅಪೂರ್ಣತೆ, ದ್ವಂದ್ವ, ಕೊರತೆಗಳಿಗೆಲ್ಲ ಹೊರಗಿನ ಬೇರೊಂದು ಕಾರಣವನ್ನು ಹುಡುಕಬಾರದು. ಈ ಸಮಸ್ಯೆಗಳೆಲ್ಲವನ್ನೂ ತನ್ನ ಹೊರಗಿರುವ ಆಗಂತುಕನಂತೆ ನೋಡುವುದರಿಂದಲೇ ಹಾಗೂ ಅದಕ್ಕೆ ಪರಿಹಾರ ಕಂಡು ಹಿಡಿಯುವ ಪ್ರಯತ್ನದಿಂದಲೇ ಎಲ್ಲ ಸಮಸ್ಯೆಗಳೂ ಉದ್ಭವಿಸುತ್ತವೆ. ಇದೇ ನಮ್ಮ ಮುಗಿಯದ ಯುದ್ಧ. ತನ್ನ ಎಲ್ಲ ಸಮಸ್ಯೆಗಳಿಗೂ ತಾನೇ ವಿವಿಧ ರೂಪಗಳಲ್ಲಿ ಕಾರಣ ಎಂದು ಮನುಷ್ಯನಿಗೆ ಯಾವಾಗ ತಿಳಿಯುತ್ತದೆಯೋ ಅಂದೇ ಅವನು ಈ ತುಮುಲದಿಂದ ಮುಕ್ತನಾಗುತ್ತಾನೆ.

ಮನುಷ್ಯನ ಮನಸ್ಸು ಯಾವಾಗಲೂ ಭೂತಕಾಲದ ಅನುಭವಗಳ ಹಾಗೂ ಪರಿಣಾಮಗಳ ಮೊತ್ತವೇ ಆಗಿರುವ ಕಾರಣ ಇದು ಯಾವಾಗಲೂ ಅಪೂರ್ಣ—ಅತೃಪ್ತ. ಇದೇ ಅವನ ಭವಿಷ್ಯತ್ತಿನ ಕಾಳಜಿಯೂ ಆಗಿರುತ್ತದೆ. ಆದ್ದರಿಂದಲೆ ಇದು ಸಾಮಾನ್ಯವಾಗಿ

ಚಿತ್ರಕಲೆಗಾರರಾಗಿಯೂ ಪ್ರಸಿದ್ಧರಾಗಿರುವ ಪಿ.ಪುರುಷೋತ್ತಮ ಕಾರಂತರು ಮಂಗಳೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರಾಗಿದ್ದಾರೆ.

ಅನಿವಾರ್ಯ! ಈ ತುಂಬುವ ಹಂಬಲಕ್ಕೆಲ್ಲ ಮುಖ್ಯ ಕಾರಣವಾದ ಮನುಷ್ಯನ ಮನಸ್ಸು ಎಂದೂ ತುಂಬುವುದೇ ಇಲ್ಲ! ಪೂರ್ಣವಾಗುವುದೇ ಇಲ್ಲ, ಅದರ ಸಾಧ್ಯತೆಯೂ ಇಲ್ಲ! ಆದ್ದರಿಂದಲೆ ಅದಕ್ಕೆ ಸದಾಕಾಲವೂ ತುಂಬುವ ಹಂಬಲವೇ ಇರುತ್ತದೆ. ನಿಜವಾಗಿ ಮನಸ್ಸಿನ ಅಸ್ತಿತ್ವವೂ ಜೀವನವೂ ಕೊರತೆ ಹಾಗೂ ದ್ವಂದ್ವಗಳಿಂದಲೇ ರೂಪಿತವಾಗಿದೆ, ಯಾಕೆ? ಪ್ರಾಪಂಚಿಕ ಜೀವನದ ಬಹಳ ಮುಖ್ಯ ಉಪಕರಣವಾದ ಮನಸ್ಸನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು. ಮನುಷ್ಯನ ಮನಸ್ಸಿನ ಒಂದು ವಿಶೇಷ ಗುಣವೆಂದರೆ—ಅದು ಹೊರಗಿನ ಪ್ರಪಂಚವನ್ನೂ ಹಾಗೂ ಒಳಗಿನ ಪ್ರಪಂಚವನ್ನೂ ಅನುಭವಿಸುತ್ತದೆ ಮತ್ತು ತಿಳಿ ಯಲು ಶಕ್ತವಾಗಿರುತ್ತದೆ. ಅಲ್ಲದೆ ಬೇಕಾದಾಗ ತನ್ನನ್ನೇ ತಾನು ನೋಡಿಕೊಳ್ಳುತ್ತದೆ. 'ಈ ತನ್ನನ್ನು ತಾನು ನೋಡಿಕೊಳ್ಳುವ' ನಮ್ಮ ಮನಸ್ಸಿನ ಗುಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದೇ ನಮ್ಮ ಒಂದು ವಿಶೇಷ ಅನುಭವವಾಗುತ್ತದೆ. ಈ ವಿಶೇಷ ಗುಣದಿಂದಲೇ ನಮ್ಮ ಮನಸ್ಸು ನಮ್ಮ ಜೀವನದಲ್ಲಿ ಒಂದು ಅಮೂಲ್ಯವಾದ ಪಾತ್ರ ವಹಿಸಲು ಸಾಧ್ಯ. ಈ ಗುಣದಿಂದಲೇ ಮನಸ್ಸು ತನ್ನೊಳಗಿನ ಅಪೂರ್ಣತೆ, ಹಂಬಲ ಮುಂತಾದ ದ್ವಂದ್ವಗಳನ್ನು ತಾನೇ ನೋಡಿಕೊಳ್ಳುವ ಯೋಗ್ಯ ಉಪಕರಣವಾಗಿದೆ!

ನಮ್ಮ ಮನಸ್ಸೆಂಬ ಉಪಕರಣದ ನಿಜವಾದ ಗುಣವನ್ನೂ ಬಣ್ಣಗಳನ್ನೂ ಭಾವಗಳನ್ನೂ ತಿಳಿದುಕೊಳ್ಳದಿದ್ದರೆ, ನಾವು ಕಾಣುವ ಸತ್ಯ ಈ ನಮ್ಮ ಮನಸ್ಸಿನ ಗುಣಗಳ ಪರಿಣಾಮವೇ ಆಗಿರಲು ಸಾಧ್ಯವಲ್ಲವೇ! ಆದ್ದರಿಂದಲೇ ಸಾಮಾನ್ಯವಾಗಿ ನಮ್ಮೆಲ್ಲರ ಶ್ರದ್ಧೆ-ಧ್ಯೇಯ-ಧೋರಣೆ, ದೇವರು-ಜೀವನದ ಕಲ್ಪನೆ, ಭಾವನೆಗಳೆಲ್ಲವೂ ಈ ಉಪಕರಣದ ಪರಿಣಾಮದಿಂದಾಗಿ ವೈವಿಧ್ಯಮಯವಾಗಿರುವುದನ್ನೇ ಕಾಣುತ್ತೇವೆ. ಅಂದರೆ ಸಾಮಾನ್ಯವಾಗಿ ನಮ್ಮೆಲ್ಲರ ಮನಸ್ಸಿನ ದೃಷ್ಟಿ ಪೂರ್ವಾಗ್ರಹಪೀಡಿತವಲ್ಲದ, ಪ್ರಾಮಾಣಿಕ ಹಾಗೂ ನೈಜ ಸ್ಥಿತಿಯಲ್ಲಿ ಇರುವುದೇ ಇಲ್ಲ. ಆದ್ದರಿಂದಲೇ ಸತ್ಯವನ್ನು ಇದ್ದಂತೆ ಕಾಣಲು ಹಾಗೂ ನಮ್ಮ ಮನಸ್ಸನ್ನು ಅದು ಇದ್ದಂತೆ ತಿಳಿದುಕೊಳ್ಳಲು ಮೊದಲು ಪ್ರಯತ್ನಿಸಬೇಕಾಗುತ್ತದೆ. ಅನಂತರ ನಾವು ಗುಣಗಳಿಗೆ ಅತೀತರಾಗುತ್ತೇವೆ.

ನಿಜವಾಗಿ ನೋಡಿದರೆ ಈ ಮನಸ್ಸು ಎಂಬುದಕ್ಕೆ ಅಸ್ತಿತ್ವವೇ ಇಲ್ಲ. ಇದೊಂದು ಬರಿಯ ವೃತ್ತಿಗಳು (thoughts) ಹುಟ್ಟುವ, ಅಡಗುವ ಸಂವಹನದ ವ್ಯವಸ್ಥೆ ಮಾತ್ರ. ನೀರಿನ ಅಸಂಖ್ಯಾತ ಕಣಗಳು ಅವ್ಯಾಹತವಾಗಿ ಹರಿಯುತ್ತಿರುವುದರಿಂದಲೇ ನದಿಯ ಅಸ್ತಿತ್ವವಿರುತ್ತದೆ. ನೀರಿನ ಹರಿವು ಇಲ್ಲದಿದ್ದರೆ ನದಿಯೇ ಇರಲಾರದು. ಹಾಗೆಯೇ, ವಿವಿಧ ವೃತ್ತಿಗಳು ಹುಟ್ಟಿಕೊಂಡು, ಒಂದಿಷ್ಟು ಕಾಲ ಇದ್ದು, ಮತ್ತೆ ಅಡಗುವುದೇ ನಿಜವಾದ ಮನಸ್ಸು! ಆದ್ದರಿಂದಲೇ ಈ ಮನಸ್ಸು ಯಾವಾಗಲೂ ಚಲನಶೀಲವಾಗಿಯೂ, ಅನಿಶ್ಚಿತವಾಗಿಯೂ ಇರುತ್ತದೆ.

ಮನಸ್ಸಿನ ಇಂತಹ ವೃತ್ತಿಗಳಾದರೂ ಉತ್ಪನ್ನವಾಗುವುದೆಲ್ಲಿ? ಹೊರಗಿನಿಂದ ಇದಕ್ಕೆ ಕಾರಣ ಪರಿಣಾಮಗಳಿದ್ದರೂ ಅವುಗಳು ಸ್ಪಂದಿಸುವುದು ಒಳಗೇ, ಹೊರಗಲ್ಲ! ನಿರಂತರವೂ ಸಂಭವಿಸುತ್ತಿರುವ ಈ ಸ್ಫುರಣಕ್ಕೆ ಸದಾ ಸಿದ್ಧವಿರುವ ಒಂದು ಕೇಂದ್ರವೋ, ತಾಣವೋ, ಯಾವುದೋ ಒಂದು ವ್ಯವಸ್ಥೆ ಇರಬೇಕು. ಇದರ ಇರವನ್ನೂ, ರಚನೆಯನ್ನೂ ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಹೊರಗಿನಿಂದ ಬಂದ ಒಂದು ಅನುಭವ, ಅದಕ್ಕೊಂದು ಒಳಗಿನ ಪ್ರತಿಕ್ರಿಯೆ ಮತ್ತು ಅದರ ನೆನಪು—ಮತ್ತೆ ಹಾಗೆಯೇ ಒಂದು ಅನುಭವದ ನೆನಪಿನಿಂದ ಪುನಃ ಪ್ರತಿಕ್ರಿಯೆ. ಹೀಗೆ ಒಂದು ವೃತ್ತಿಯ ಕಾರ್ಯ ರೂಪ ನಡೆಯುತ್ತದೆ. ಆದರೆ ಇಲ್ಲಿ ಅನುಭವ ಹಾಗೂ ಪ್ರತಿಕ್ರಿಯೆಗಳಿಗಿಂತಲೂ ನೆನಪಿನ ಕಾರ್ಯಸೂಕ್ಷ್ಮತೆ ಮತ್ತು ಪ್ರಭಾವ ಬಹಳ ಮುಖ್ಯ. ಈ ನೆನಪಿನಿಂದಲೇ ನಮ್ಮ ಜೀವನವು ಭೂತದಿಂದ ಭವಿಷ್ಯತ್‌ಗೆ ಕಲ್ಪನೆಯ ಹೆಜ್ಜೆಯಿಟ್ಟು ಚಲಿಸುತ್ತಿರುತ್ತದೆ. ಇದರಿಂದಲೇ ನಮ್ಮ ಜೀವನವು ಮುಂದುವರಿಯುತ್ತದೆ. ನಮ್ಮ ಜೀವನದಲ್ಲಿ ನೆನಪು ಮತ್ತು ಅದರಿಂದ ಜನಿಸುವ ಸಂಸ್ಕಾರ ಬಹಳ ಅಮೂಲ್ಯ ಪಾತ್ರ ವಹಿಸುತ್ತವೆ.

ನಮ್ಮ ಮನಸ್ಸಿನೊಳಗೆ ಹುಟ್ಟಿ ಅಡಗುವ ಅಸಂಖ್ಯಾತ ಸೂಕ್ಷ್ಮಾತಿಸೂಕ್ಷ್ಮ ವೃತ್ತಿಗಳ ವೇಗದಂತೆ ನೆನಪಿನ ಮುದ್ರಣವೂ (ಸಂಸ್ಕಾರ) ನಮಗೆ ಗಮನಿಸಲು ಅಸಾಧ್ಯದಂತಿದೆ. ನಮ್ಮ ಹೊರಗಿನ ಅಥವಾ ಒಳಗಿನ ಅನುಭವದ ಒಂದು ವೃತ್ತಿ ಕ್ಷಣಾರ್ಧದಲ್ಲಿ ನೆನಪಿನ ಹಳೆಯ ಸಂಗ್ರಹದಿಂದ ಮತ್ತೆ ಯಾವುದಕ್ಕಾದರೂ ಹೋಲಿಸಲ್ಪಟ್ಟು, ಯಾವ ಗುಂಪಿಗೆ ಈ ವೃತ್ತಿ ಸೇರುವುದೆಂದು ಗುರುತಿಸಲ್ಪಡುತ್ತದೆ. ಈ ಕ್ರಿಯೆಯನ್ನು ನಾವು ತಿಳಿಯುವುದರಿಂದ ಒಂದು ಬಹಳ ಮುಖ್ಯವಾದ ವಿಷಯ ನಮ್ಮ ಗಮನಕ್ಕೆ ಬರುತ್ತದೆ. ಅಂದರೆ, ನಮ್ಮಲ್ಲಿ ಇಷ್ಟರತನಕ ಪರಿಚಿತವಾಗದ, ಮುದ್ರಿತವಾಗದ ಹೊಸ ವಿಷಯವನ್ನು ಕಂಡಾಗ ಮನಸ್ಸು ಅದನ್ನು ತನ್ನ ಸಂಗ್ರಹದ ಯಾವ ಗುಂಪಿಗೂ ಸೇರಿಸಲಾಗದೆ ನಿರಾಕರಿಸಬಹುದು; ಪರಿಚಿತವಿದ್ದರೆ ಮಾತ್ರ ಆ ಗುಂಪಿಗೆ ಸೇರಿಸಿ ಸ್ವೀಕರಿಸಬಹುದು. ಆದ್ದರಿಂದ ನಮ್ಮ ಮನಸ್ಸು ಇಂತಹ ಪರಿಚಿತ ಅನುಭವಗಳ ವೃತ್ತಿಗಳ ಮೊತ್ತವೇ ಆಗಿರುತ್ತದೆ. ಈ ಸಂಗ್ರಹ, ಮೊತ್ತ, ಗುಂಪು ಅಥವಾ ಗ್ರಂಥಿಯೆ ಸ್ವಘೋಷಿತ 'ನಾನು'. 'ನಾನು ಭಕ್ತ', 'ನಾನು ಧನಿಕ', 'ನಾನು ಬಡವ', 'ನಾನು ಜ್ಞಾನಿ', 'ನಾನು ಅಜ್ಞಾನಿ', 'ನಾನು ಸಂಸಾರಿ' ಎಂದುಕೊಳ್ಳುವುದೂ ಅವನ ನೆನಪಿನ ಸಂಗ್ರಹದ ಗುಣದಿಂದ ಅಲ್ಲವೇ! ನೇಯಿಗೆಯ ನೂಲಿನ ಬಣ್ಣ ಬಟ್ಟೆಗೆ ಇರುವಂತೆ ಮನಸ್ಸು 'ನಾನು ಇಂಥವನು' ಎಂದುಕೊಳ್ಳುತ್ತದೆ. ಹೀಗೆ ಜೀವನದುದ್ದಕ್ಕೂ ಈ ಸ್ವಘೋಷಿತ 'ನಾನು'ವನ್ನು ನಮ್ಮ ಇಷ್ಟದಂತೆ ಬೆಳೆಸಿಕೊಂಡೆ ಬರುತ್ತೇವೆ.

ಹೀಗೆ ಈಗ ಇದ್ದು ಮುಂದೆ ಇರದ, ಈಗ ಇರದೆ ಮುಂದೆ ಇರುವಂತಹ ಅಸ್ಥಿರತೆಯನ್ನು ಈ ಮನಸ್ಸು ಒಪ್ಪದೇ, ತನ್ನ ನಿಜವಾದ ಕೊರತೆಗಳನ್ನು ಒಪ್ಪಿಕೊಳ್ಳದೆ, ತನ್ನ ಕಾಲ್ಪನಿಕ ಕೊರತೆಗಳನ್ನು ತುಂಬಲು ಮಾಡುವ ಅಸಾಧ್ಯ ಪ್ರಯತ್ನ

ಮೂರ್ಖತನವೇ ಸರಿ. ತಾನು ವೃತ್ತಿಯಷ್ಟೇ ಅಸ್ಥಿರವಾಗಿದ್ದರೂ ನಿರಂತರ ಅಸ್ತಿತ್ವವನ್ನೂ, ಭವಿಷ್ಯತ್ತನ್ನೂ ಊಹಿಸಿಕೊಂಡು, ನಿರ್ಮಿಸಿಕೊಳ್ಳುತ್ತಿರುತ್ತದೆ. 'ನಾನು ಈಗ ಇದ್ದೇನೆ, ನಾಳೆಯೂ ಇರುವೆನು' ಎಂದು ತನ್ನ ಸ್ವತಂತ್ರ ಇರುವಿಕೆಯನ್ನು ಕಲ್ಪಿಸಿಕೊಳ್ಳುತ್ತದೆ. ಈ ಮನಸ್ಸು ನೆನಪಿನ ಸಹಾಯದಿಂದ ಭವಿಷ್ಯದ ಹಂಬಲವನ್ನೇ ಜೀವಾಳವಾಗಿರಿಸಿಕೊಂಡು ಬದುಕಲು ಇಚ್ಛಿಸುತ್ತದೆ, ಬದುಕುತ್ತಿದೆ!

ಈ ಅಸ್ಥಿರವಾದ 'ನಾನು'ವೇ ಯಕ್ಷನ ಏಳನೇ ಕೊಪ್ಪರಿಗೆ! ಈ ಅಸ್ಥಿರವಾದ 'ನಾನು' ನಿರ್ಮಿಸಿಕೊಂಡ ಹೊರಗಿನ ಮತ್ತು ಒಳಗಿನ ಪ್ರಪಂಚವೆಲ್ಲ ಈ ಏಳನೇ ಕೊಪ್ಪರಿಗೆ. ಈ 'ನಾನು'ವಿನ ತುಂಬಲಾರದ ಹಂಬಲವೇ ಆ ಏಳನೇ ಕೊಪ್ಪರಿಗೆಯ ಒಂದು ಹಿಡಿಯಷ್ಟು ಬಂಗಾರದ ಕೊರತೆ! ನಿಜವಾಗಿ ನೋಡಿದರೆ ಈ 'ನಾನು' ಕಾಣುವ, ಕೇಳುವ, ಆಶಿಸುವ, ಸೇವೆ ಮಾಡುವ, ಪೂಜಿಸುವ, ಪಡೆಯಬೇಕು, ಆಗಬೇಕು, ಸೇರಬೇಕು ಎನ್ನುವ ಕ್ರಿಯೆಗಳೆಲ್ಲ ಆ ಯಕ್ಷನ ಏಳನೇ ಕೊಪ್ಪರಿಗೆಯ ಬರಿದಾದ ಜಾಗವಾಗಿದೆ! ಈ ನಿಜವನ್ನು ನಾವು ಅರಿತುಕೊಂಡು ತುಂಬಿಸುವ ಪ್ರಯತ್ನವನ್ನು ತ್ಯಜಿಸಿ ಬಂಗಾರದಿಂದ ತುಂಬಿ ಥಳಥಳಿಸುವ ಏಳು ಕೊಪ್ಪರಿಗೆಗಳನ್ನೂ ಇದ್ದಂತೆಯೇ ಉಪಯೋಗಿಸುವುದೇ ಪೂರ್ಣಜೀವನವಲ್ಲವೇ!

ಈ 'ನಾನು'ವನ್ನು ಹಿಡಿಯುವುದು ಮಾತ್ರ ಬಹಳ ಕಷ್ಟಸಾಧ್ಯ. ಹುಡುಕುವವನೂ ಅವನೇ—ಎಂದು ಅಲ್ಲಗಳೆದರೆ ಮತ್ತೆ ಮತ್ತೆ ಅದೇ ಹುಡುಕುವವನೇ ಹುಟ್ಟಿಕೊಳ್ಳುತ್ತಾನೆ. ಈ ಹುಡುಕುವವನೇ ಹುಡುಕಲ್ಪಡುವವನಾಗುತ್ತಿರುವ ಆಟ ಅಂತ್ಯವಿಲ್ಲದೆ ನಡೆಯುತ್ತದೆ. ಆದರೆ ಈ ಹುಡುಕಾಟದ ಓಟವು ವಿಸ್ತಾರ, ವೈಶಾಲ್ಯ ಯಾವುದೂ ಇರದ ಒಂದು ನಿಶ್ಚಿತವಾದ ಕೇಂದ್ರದ ಸುತ್ತ! ತನ್ನ ಬಾಲವನ್ನೇ ನುಂಗಲು ಸುತ್ತುವ ಹಾವಿನಂತೆ. ಆದರೂ, ಈ ಹುಡುಕಾಟದ ಪ್ರಯತ್ನ ಒಮ್ಮೆ ತಾನಾಗಿ ನಿಂತು ಆ 'ನಾನು' ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಆಗ ಇರುವುದೇ ವರ್ತಮಾನ, ಅನಂತದ ಅಸ್ತಿತ್ವ. ಆಗ ಉಳಿಯುವ 'ನಾನು' ಪೂರ್ಣ.

ಕ್ಷೌರಿಕನಿಗೆ ಅರಸ ಹೇಳಿದ: "ಏನಿದು ಮುಗಿಯದ ಹಂಬಲ ನಿನ್ನದು? ಯಕ್ಷನ ಕೊಪ್ಪರಿಗೆ ಪಡೆದಿದ್ದೀಯೋ! ಹೂಂ, ಅದನ್ನು ಮರಳಿಸು." ಆಗ ಆ ರಹಸ್ಯವನ್ನರಿತ ಕ್ಷೌರಿಕನ ತುಂಬುವ ಹಂಬಲವೂ ಕೂಡಲೇ ಮುಗಿದಿತ್ತು! ✡

# ಪ್ರಹಸನ ಪ್ರಸಂಗ

ಯಯಾತಿಯಂತೆ ನಾವೆಲ್ಲರೂ ಚಿರಕಾಲ ಬದುಕಬೇಕು, ಸುಖವನ್ನೇ ಅನುಭವಿಸಬೇಕು ಎಂದು ಆಶಿಸುತ್ತೇವೆ. ಹುಟ್ಟಿದ ಪ್ರತಿಯೊಂದು ಜೀವಿಗೂ ಸಾವು ನಿಶ್ಚಿತವೆಂಬ ಸತ್ಯ ಗೊತ್ತಿದ್ದರೂ ಅದನ್ನು ಮನಸ್ಸಿನ ಯಾವುದೋ ಮೂಲೆಗೆ ತಳ್ಳಿ ನಾವು ಸುಖವಾಗಿದ್ದೇವೆಂಬ ಭ್ರಾಂತಿಯಲ್ಲಿ ಜೀವಿಸುತ್ತಿರುತ್ತೇವೆ.

೧೦೫ ವರ್ಷ ವಯಸ್ಸಾಗಿದ್ದ ಒಬ್ಬ ಮುದುಕ ತಪ್ಪದೆ ಪ್ರತಿ ಭಾನುವಾರದಂದು ಚರ್ಚಿಗೆ ಹೋಗಿ ಪ್ರಾರ್ಥಿಸುತ್ತಿದ್ದ. ಎಲ್ಲರೂ ಅವನ ಧಾರ್ಮಿಕ ನಿಷ್ಠೆಯನ್ನು ಮೆಚ್ಚಿದ್ದರು. ಆದರೆ ಇದ್ದಕ್ಕಿದ್ದಂತೆ ಅವನು ಬರುವುದನ್ನು ನಿಲ್ಲಿಸಿದಾಗ ಚಿಂತೆಗೊಂಡ ಪಾದ್ರಿಗಳು ಅವನನ್ನು ಕಾಣಲು ಬಂದರು. ಆರೋಗ್ಯವಾಗಿಯೇ ಇದ್ದ ಆ ಮುದುಕನನ್ನು ಕಂಡು, "ಇಷ್ಟು ವರ್ಷಗಳ ಕಾಲ ನಿರಂತರವಾಗಿ ಬರುತ್ತಿದ್ದ ತಾವು ಈಗೇಕೆ ಬರುತ್ತಿಲ್ಲ?" ಎಂದು ಪ್ರಶ್ನಿಸಿದರು. ಮುದುಕ ಮೆಲ್ಲನೆ ಉಸುರಿದ, "ಪಾದ್ರಿಗಳೇ! ನೋಡಿ, ನನಗೆ ೯೦ ವಯಸ್ಸಾದಾಗ ಇನ್ನೇನು ಭಗವಂತ ನನ್ನನ್ನು ಕರೆದುಕೊಂಡುಬಿಡುತ್ತಾನೆ ಎಂದು ತಿಳಿದಿದ್ದೆ. ಆಮೇಲೆ ೯೫ ಆಯಿತು, ೧೦೦ ಆಯಿತು, ಈಗ ೧೦೫ ಆಗಿದೆ. ಹಾಗಾದರೆ ಭಗವಂತ ತನ್ನ ಅನೇಕ ಕೆಲಸಗಳ ಮಧ್ಯೆ ನನ್ನನ್ನು ಮರೆತಿದ್ದಾನೆ ಎಂದನಿಸುತ್ತದೆ. ಅವನಿಗೆ ಜ್ಞಾಪಿಸುವುದು ನನಗೂ ಇಷ್ಟವಿಲ್ಲ."

❖❖❖

ದೇವರನ್ನು ತಿಳಿಯಲು ತಮ್ಮ ಧರ್ಮವೇ ಅತ್ಯುತ್ತಮ ಮಾರ್ಗ, ತಾವು ಮಾತ್ರವೇ ದೇವರ ಅತ್ಯುತ್ತಮ ಪ್ರತಿನಿಧಿಗಳೆಂಬ ಭ್ರಮೆ ಮತಾಂಧರಿಗೆ. ಭಗವಂತನೊಡನೆ ಸಂವಹನ ತಮ್ಮ ಮೂಲಕ ಮಾತ್ರ ಸಾಧ್ಯ ಎನ್ನುತ್ತಾ ದೇವರನ್ನೇ ಸೀಮಿತಗೊಳಿಸುವ ಮತಾಂಧತೆ ಎಷ್ಟು ಅಪಾಯಕಾರಿಯೋ ಅಷ್ಟೇ ಹಾಸ್ಯಾಸ್ಪದ ಕೂಡ !

ಇಸ್ರೇಲಿನ ಯಹೂದ್ಯರ ಪ್ರಧಾನ ಗುರುಗಳಾದ ರಬ್ಬಿ ಒಮ್ಮೆ ಕ್ರೈಸ್ತಮತದ ಪ್ರಧಾನ ಗುರುಗಳಾದ ಪೋಪರನ್ನು ಕಾಣಲು ರೋಮಿಗೆ ಬಂದರು. ಪೋಪರ ಕೋಣೆಯಲ್ಲಿ ಒಂದು ಅದ್ಭುತವಾದ ದೂರವಾಣಿ ಯಂತ್ರ ಇರುವುದನ್ನು ಕಂಡು ಅದರ ಉದ್ದೇಶವೇನು ಎಂದು ಕೇಳಿದರು.

"ಅದು ದೇವರೊಂದಿಗೆ ನೇರ ಸಂಪರ್ಕ ಕಲ್ಪಿಸುತ್ತದೆ" ಎಂದು ಪೋಪ್ ಹೇಳಿದಾಗ ರಬ್ಬಿ ಅದನ್ನು ನಂಬಲು ಸಿದ್ಧರಿರಲಿಲ್ಲ. ವಿಶ್ವಾಸ ಮೂಡಿಸಲು ಪೋಪ್, ಯಂತ್ರವನ್ನು ಉಪಯೋಗಿಸುವಂತೆ ಅವರನ್ನು ಒತ್ತಾಯಿಸಿದರು. ರಬ್ಬಿ ಪ್ರಯತ್ನಿಸಿ, ದೇವರೊಂದಿಗೆ ಬಹಳ ಹೊತ್ತು ಮಾತನಾಡಿದರು.

ಮಾತಾಡಿದ ನಂತರ ರಬ್ಬಿ ಹೇಳಿದರು, "ನಾನು ಈ ಕರೆಗೆ ತಗುಲಿದ ವೆಚ್ಚವನ್ನು ಕೊಟ್ಟುಬಿಡುತ್ತೇನೆ." ಪೋಪ್ ಬೇಡವೆಂದರೂ ರಬ್ಬಿ ಬಿಡಲೊಲ್ಲ. ಕಡೆಗೆ ಪೋಪ್ ಲೆಕ್ಕ ಹಾಕಿ ಒಂದು ಲಕ್ಷ ಲೀರಾ (೩೨೬೪ ರೂಪಾಯಿಗಳು) ಎಂದು ತಿಳಿಸಿದರು. ರಬ್ಬಿ ಕೂಡಲೇ ಹಣವನ್ನು ಸಂತೋಷದಿಂದ ಕೊಟ್ಟರು.

ಕೆಲವು ತಿಂಗಳ ನಂತರ ಜೆರುಸಲೆಂ ನೋಡಲು ಪೋಪ್ ಹೋದಾಗ ರಬ್ಬಿಗಳ ಕೋಣೆಯಲ್ಲೂ ತಮ್ಮಲ್ಲಿರುವಂತಹುದೇ ದೂರವಾಣಿ ಯಂತ್ರವನ್ನು ಕಂಡು, ಅದೂ ಕೂಡ ದೇವರೊಂದಿಗೆ ನೇರ ಸಂಪರ್ಕ ಹೊಂದಿದೆ ಎಂದು ತಿಳಿದುಕೊಂಡರು. ಯಾವುದೋ ವಿಷಯದ ಬಗ್ಗೆ ದೇವರ ಸಲಹೆ ಬೇಕಾಗಿದ್ದು ಪೋಪ್ ದೂರವಾಣಿಯನ್ನು ಉಪಯೋಗಿಸಲು ಬಯಸಿದರು. ರಬ್ಬಿ ಸಂತೋಷದಿಂದ ಒಪ್ಪಿಕೊಂಡು ಯಂತ್ರವನ್ನು ನೀಡಿದರು. ಪೋಪ್ ಬಹಳ ಹೊತ್ತು ದೇವರೊಂದಿಗೆ ಸಮಾಲೋಚನೆ ನಡೆಸಿದ ಅನಂತರ ವೆಚ್ಚವನ್ನು ನೀಡಲು ಮುಂದಾದರು. ರಬ್ಬಿ ಬೇಡವೆಂದರು. ಪೋಪ್ ಒತ್ತಾಯಿಸಿದಾಗ ರಬ್ಬಿ ಲೆಕ್ಕಹಾಕಿ ಕೇವಲ ಎರಡು ಶೆಕೆಲ್ (೨೨ ರೂಪಾಯಿಗಳು) ಎಂದು ತಿಳಿಸಿದರು. ಪೋಪ್‌ಗೆ ಆಶ್ಚರ್ಯವಾಯಿತು. "ಅದು ಹೇಗೆ ಅಷ್ಟು ಕಮ್ಮಿ?" ಎಂದು ಕೇಳಿದರು.

ರಬ್ಬಿ, ನಗುತ್ತ ಉತ್ತರಿಸಿದರು: "ಇದು ಲೋಕಲ್ ಕಾಲ್." ✡